**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ.**

**ಸಿಸಿ ನಂ. 277 / 2018**

| | | |
|---|---|---|
| ಸಾಕ್ಷಿಯ ಹೆಸರು | : ರಾಘವೇಂದ್ರ | |
| ತಂದೆಯ ಹೆಸರು | : ಪುಟ್ಟಾಚಾರ್ | |
| ವಯಸ್ಸು | : 35 ವರ್ಷ | |
| ಉದ್ಯೋಗ | : ಅಕ್ಕಸಾಲಿಗರು | ಚಾಸಾ – 16 |
| ವಾಸ ಸ್ಥಳ | : ಕೊಳ್ಳೇಗಾಲ | ಪ್ರಾಸಾ – 10 |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕಃ** 03.12.2025

**ಮುಖ್ಯ ವಿಚಾರಣೆ – ಮಾನ್ಯ ಸ.ಸ.ಅ. ರವರಿಂದ**

ನಾನು ಕೊಳ್ಳೇಗಾಲದಲ್ಲಿ ಚಿನ್ನದ ಕೆಲಸವನ್ನು 20 ವರ್ಷಗಳಿಂದ ಮಾಡುತ್ತಿದ್ದೇನೆ. 3ನೇ ಆರೋಪಿ ಗೊತ್ತು ಆತ ನನ್ನ ಸ್ನೇಹಿತ. ಆತ ಸಿಮೆಂಟ್ ಅಂಗಡಿಯಲ್ಲಿ ಕೆಲಸ ಮಾಡುತ್ತಾನೆ. ಆರೋಪಿ ನನ್ನ ಜೊತೆ ಹಣಕಾಸಿನ ವ್ಯವಹಾರ ಮಾಡುತ್ತಾನೆ ಎಂದರೆ ಸರಿಯಲ್ಲ. ಪೋಲಿಸರು ನನ್ನನ್ನು ಚಿನ್ನದ ತೂಕ ಮಾಡಲು ಕರೆಸಿರುತ್ತಾರೆ. ಚಿನ್ನದ ತೂಕ ಮತ್ತು ಮೌಲ್ಯವನ್ನು ನಾನು ತಿಳಿಸಿರುತ್ತೇನೆ. ಒಟ್ಟು ಎಷ್ಟು ಚಿನ್ನಾಭರಣಗಳನ್ನು ತೂಕ ಮಾಡಿದ್ದೇನೆಂದು ಗೊತ್ತಿಲ್ಲ. ನಾನು ಹೇಳಿಕೆಯನ್ನು ಕೊಟ್ಟಿರುತ್ತೇನೆ. ಆ ದಿನ ನಾನು ತೂಕ ಮಾಡಿದ ಒಡವೆಗಳು ಯಾರಿಗೆ ಸೇರಿತ್ತು ಮತ್ತು ಯಾರಿಂದ ವಶಪಡಿಸಿಕೊಳ್ಳಲಾಯಿತೆಂದು ನನಗೆ ಗೊತ್ತಿಲ್ಲ. ಆ ದಿನ ಠಾಣೆಯಲ್ಲಿ ನನ್ನನ್ನು ಹೊರತು ಪಡಿಸಿ ಬೇರೆ ಯಾರಿದ್ದರು ಎಂದು ನನಗೆ ನೆನಪಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಮಾನ್ಯ ಸ.ಸ.ಅ.ರವರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಅನುಮತಿಸಲಾಯಿತು.)

**ಪಾಟೀ ಸವಾಲು – ಮಾನ್ಯ ಸ.ಸ.ಅ. ರವರಿಂದ**

ದಿನಾಂಕಃ 17.11.2017 ರಂದು ಪೋಲಿಸರು ಒಬ್ಬ ಆಸಾಮಿಯನ್ನು ತೋರಿಸಿದ್ದು ಅವನ ಹೆಸರು ಮಹಮದ್ ಫೈರೋಜ್ ಖಾನ್ ಎಂದು ತಿಳಿಸಿ ಆತನು ದರೋಡೆ ಮಾಡಿರುವ ಚಿನ್ನಗಳನ್ನು ತೂಕ ಮಾಡುವ ಸಲುವಾಗಿ ನನ್ನನ್ನು ಕರೆದಿರುತ್ತಾರೆ ಎಂದರೆ ಸರಿ. ಒಟ್ಟು 5 ಚಿನ್ನದ ಆಭರಣಗಳನ್ನು ಒಂದು 30 ಗ್ರಾಂ, 96 ಗ್ರಾಂ, 20 ಗ್ರಾಂ, 20.1 ಗ್ರಾಂ, 30.5 ಗ್ರಾಂ ತೂಕ ಮಾಡಿ ಕೊಟ್ಟಿರುತ್ತೇನೆ ಎಂದರೆ ಸರಿ. ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ. ಆ ದಿನ ನೋಡಿದ ವ್ಯಕ್ತಿ ಈ ದಿನ ನ್ಯಾಯಾಲಯದಲ್ಲಿರುವ ವ್ಯಕ್ತಿಯೇ ಆಗಿರುತ್ತಾನೆ.

**ಪಾಟೀ ಸವಾಲು – ಆರೋಪಿ ಪರ ವಕೀಲರಿಂದ**

ಆ ದಿನ ತೂಕ ಮಾಡಿಕೊಟ್ಟ ಆಭರಣಗಳು ಯಾವು ಯಾವುವೆಂದು ಮತ್ತು ಅವುಗಳ ತೂಕ ಈಗ ನನಗೆ ಹೇಳಲಾಗುವುದಿಲ್ಲ. ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ವ್ಯಕ್ತಿಯ ಹೆಸರು ಅಲೀಂ ವುಲ್ಲಾ ಇರುತ್ತದೆ. ಆರೋಪಿಯು ನನ್ನ ಜೊತೆ ಯಾವುದೇ ವ್ಯವಹಾರ ಮಾಡುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.